ಒ.ಎಸ್.ನಂಃ16/2017
ಪಿ.ಡಬ್ಲ್ಯೂ.1

**<u>ದಿಃ07.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ಪ್ರತಿ ವಾದಿ ಪರ ಶ್ರೀ.ಬಿ.ವಿ.ಆರ್., ವಕೀಲರಿಂದಃ-

ನಾನು ವ್ಯವಸಾಯ ಮಾಡುತ್ತೇನೆ. ನಾನು 6 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡುತ್ತಿದ್ದೇನೆ. ನಾನು ಹುಟ್ಟಿನಿಂದಲೂ ಹಾಲೇಕಲ್ಲು ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಶಾಲೆ ಬಿಟ್ಟ ನಂತರ ನಾನು ಇವತ್ತಿನವರೆಗೆ ವ್ಯವಸಾಯ ವೃತ್ತಿ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆಯ ಹೆಸರು ಚೆನ್ನಪ್ಪ. ನಮ್ಮ ತಂದೆಯವರಿಗೆ ನಾವು ಆರು ಜನ ಮಕ್ಕಳು. ಆರ್ ನಾಗರಾಜಪ್ಪ, ಆರ್ ಕೆಂಚನಗೌಡ ಮತ್ತು ನಾನು ಮೂರು ಜನ ಗಂಡು ಮಕ್ಕಳು ಇರುತ್ತೇವೆ. ರತ್ನಮ್ಮ, ಸಿದ್ದಮ್ಮ ಮತ್ತು ಸರೋಜಮ್ಮ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಸಿದ್ದಮ್ಮ ಎಂಬುವವರು ಈಗ ಜೀವಂತ ಇರುವುದಿಲ್ಲ. ನಾವು ಮೂರು ಜನ ಗಂಡು ಮಕ್ಕಳು ಹಾಲೇಕಲ್ಲು ಗ್ರಾಮದಲ್ಲೆ ವಾಸವಾಗಿರುತ್ತೇವೆ ಎಂದರೆ ಸರಿ. ನನ್ನ ತಂದೆಯೊಂದಿಗೆ 05 ಜನ ಅಣ್ಣತಮ್ಮಂದಿರು ಮತ್ತು 03 ಅಕ್ಕಂದಿರು ಇರುತ್ತಾರೆ. ಪ್ರತಿವಾದಿ ನನಗೆ ಅತ್ತಿಗೆಯಾಗಬೇಕು. ಪ್ರತಿವಾದಿಯವರು ನನ್ನ ಚಿಕ್ಕಪ್ಪನಾದ ಚೆನ್ನಬಸಪ್ಪರವರ ಮಗ ಲೋಕೇಶಪ್ಪರವರ ಹೆಂಡತಿ ಇರುತ್ತಾರೆ. ನನ್ನ ಚಿಕ್ಕಪ್ಪ ಚನ್ನಬಸಪ್ಪ ರವರ ನಮ್ಮ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಅದೇ ರೀತಿ ಲೋಕೇಶ್ವರಪ್ಪ ಮತ್ತು ಅವರ ಅಣ್ಣ ತಮ್ಮಂದಿರು ನಮ್ಮ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾವೆಲ್ಲರೂ ಒಂದೇ ಗ್ರಾಮದಲ್ಲಿ ವಾಸವಾಗಿರುವುದರಿಂದ ಜಮೀನುಗಳ ಬಗ್ಗೆ ವ್ಯವಹಾರಗಳು ಒಬ್ಬರಿಗೊಬ್ಬರಿಗೆ ವಿಚಾರ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪಂದಿರು ಮತ್ತು ನನ್ನ ಕುಟುಂಬದವರು ಒಬ್ಬರಿಗೊಬ್ಬರು ಕಷ್ಟ ಸುಖಕ್ಕೆ ಬಾಗಿಯಾಗುತ್ತಿದ್ದರು ಎಂದರೆ ಸಾಕ್ಷಿಯೂ ನಮ್ಮ ತಂದೆಯ ಕಾಲದಲ್ಲಿ ಆಗುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಇನ್ನೊಂದು ಹೆಸರು ಮಲ್ಲನಗೌಡ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆ ಅಣ್ಣತಮ್ಮಂದಿರ ಜಮೀನುಗಳು ಹಾಲೇಕಲ್ಲು ಗ್ರಾಮಕ್ಕೆ ಸೇರಿದವುಗಳಾಗಿರುತ್ತವೆ ಎಂದರೆ ಸರಿ. ನಾನು ಶಾಲೆ ಬಿಟ್ಟ ಮೇಲೆ ಇಲ್ಲಿನವರೆಗೂ ವ್ಯವಸಾಯ ಮಾಡಿಕೊಂಡು ಬಂದಿರುವುದರಿಂದ ನನಗೆ ನಮ್ಮ ಕುಟುಂಬಗಳ ಆಸ್ತಿಗಳು ಯಾರು ಯಾರು ಉಳುಮೆ

ಹಾಗೂ ಸ್ವಾಧೀನದಲ್ಲಿ ಇರುತ್ತಾರೆ ಎಂಬ ವಿಚಾರ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ನಮ್ಮ ತಂದೆಯವರ ಅಣ್ಣ ತಮ್ಮಂದಿರ ಜಮೀನುಗಳ ಸರ್ವೆ ನಂಬರುಗಳು ನನಗೆ ಹೇಳಲು ಆಗುವುದಿಲ್ಲ. ನಮ್ಮ ತಂದೆಯವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡ ಜಮೀನುಗಳನ್ನು ಯಾವುವು ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹಾಲೇಕಲ್ಲು ಗ್ರಾಮದ ಸರ್ವೆ ನಂಃ68 ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಹಾಲೇಕಲ್ಲು ಗ್ರಾಮದ ಸರ್ವೆ ನಂಃ68 ರಲ್ಲಿ ವಿಸ್ತೀರ್ಣ 21 ಎಕರೆ 23 ಗುಂಟೆ ಇರುತ್ತದೆ. ಸದರಿ ಆಸ್ತಿಯಲ್ಲಿ ಯಾರು ಯಾರು ಭಾಗ ಆಗಿರುತ್ತದೆ ಎಂದರೆ ಸಾಕ್ಷಿಯೂ 10 ಎಕರೆ 31 ಗುಂಟೆ ಚೆನ್ನಪ್ಪರವರು ಎಂದರೆ ನನ್ನ ತಂದೆಯವರಿಗೆ ಬಂದಿರುತ್ತದೆ. 10 ಎಕರೆ 31 ಗುಂಟೆ ದೊಡ್ಡ ಮಹದೇವಪ್ಪ ಇವರಿಗೆ ಬಂದಿರುತ್ತದೆ. ಸದರಿ ಆಸ್ತಿಗೆ ಸಂಬಂದಪಟ್ಟ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ 10 ಎಕರೆ 31 ಗುಂಟೆ ಜಮೀನಿನಲ್ಲಿ ನಮ್ಮ ತಂದೆ 05 ಎಕರೆ 20 ಗುಂಟೆ ಆರ್.ಸಿದ್ದಪ್ಪ ರವರಿಗೆ ದಿಃ20.03.1979 ರಲ್ಲಿ ರೂ.2000/- ಗಳಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಮತ್ತು ಸಹೋದರ ಕೆಂಚನಗೌಡ ರವರು ಅಪ್ರಾಪ್ತರಾಗಿದ್ದರಿಂದ ನಮ್ಮ ನಮ್ಮ ಸಹೋದರ ನಾಗರಾಜಪ್ಪ ಮತ್ತು ತಂದೆ ಮೈನರ್ ಗಾರ್ಡಿಯನ್ ಆಗಿ ನಮ್ಮ ಪರವಾಗಿ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ಸಿದ್ದಪ್ಪ ಖರೀದಿ ನಂತರ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ನನಗೆ ಸದರಿ ಪತ್ರವನ್ನು ನೋಡಿದ ನೆನಪು ಇರುವುದಿಲ್ಲ. ನಾನು ಅದನ್ನು ನೋಡಲು ಪ್ರಯತ್ನ ಪಟ್ಟಿರುವುದಿಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

sd

**ಸಿವಿಲ್ ನ್ಯಾಯಾಧೀಶರು, ಜಗಳೂರು**